# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 152 |
| ಉತ್ತರಿಸಬೇಕಾದ ದಿನಾಂಕ | 28.01.2026 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಖ್ಯಮಂತ್ರಿಗಳ ಒಂದು ಲಕ್ಷ ವಸತಿ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಯಾವ ಯಾವ ಮಾನದಂಡಗಳ ಮೇಲೆ ಆಯ್ಕೆ ಮಾಡಲಾಗುವುದು; ಸದರಿ ಯೋಜನೆಯಡಿ ಸಲ್ಲಿಸಲಾದ ಒಟ್ಟು ಅರ್ಜಿಗಳು ಮತ್ತು ಅರ್ಹ ಫಲಾನುಭವಿಗಳೆಷ್ಟು; ಹಾಗೂ ಈ ಯೋಜನೆಯಡಿ ಪ್ರಸ್ತುತ ಎಷ್ಟು ಫ್ಲಾಟ್ ಗಳು (ಮನೆಗಳು) ಸಿದ್ಧಗೊಂಡಿವೆ ಮತ್ತು ಎಲ್ಲಿವೆ; | ಸರ್ಕಾರದ ಆದೇಶ ಸಂಖ್ಯೆ: ವಇ 112 ಹೆಚ್‌ಎಫ್‌ಎ 2021, ಬೆಂಗಳೂರು, ದಿನಾಂಕ: 05.07.2021 ರಲ್ಲಿ "1 ಲಕ್ಷ ಬಹುಮಹಡಿ ಬಂಗಳೂರು ವಸತಿ ಯೋಜನೆಯಡಿ" ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ಮಾನಂಡಗಳು ಈ ಕೆಳಗಿನಂತಿವೆ;<br><br>1. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ.300000/- (ಮೂರು ಲಕ್ಷ ರೂಪಾಯಿಗಳು ಮಾತ್ರ) ಗಳ ಮಿತಿಯೊಳಗಿರಬೇಕು.<br>2. ಅರ್ಜಿದಾರರು ಕನಿಷ್ಠ 5 ವರ್ಷಗಳಿಂದ ಬೆಂಗಳೂರು (ನಗರ) ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸವಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ವಾಸ ದೃಢೀಕರಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.<br>3. ವಸತಿರಹಿತ ಕುಟುಂಬವಾಗಿರಬೇಕು.<br>4. ಅರ್ಜಿದಾರರು ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ಹೊಂದಿರಬೇಕು.<br>5. ಅರ್ಜಿದಾರರು ಪಡಿತರ ಚೀಟಿಯನ್ನು ಹೊಂದಿರಬೇಕು.<br>6. ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ. (ಅರ್ಜಿದಾರರು ಕಂದಾಯ ಇಲಾಖೆಯಿಂದ ನೀಡಲಾಗುವ ಆದಾಯ ಪ್ರಮಾಣ ಪತ್ರದ ಸಂಖ್ಯೆಯನ್ನು ಮಾತ್ರ ನಮೂದಿಸುವುದು. ಸದರಿ ಮಾಹಿತಿಯನ್ನು ತಂತ್ರಾಂಶದ ಸಹಾಯದಿಂದ ಕಂದಾಯ ಇಲಾಖೆಯ ಡಾಟಾಬೇಸ್ ನಿಂದ "ವೆಬ್ ಸರ್ವೀಸ್" ಮೂಲಕ ನೇರವಾಗಿ ಸೆಳೆದು, ತಾಳೆ ಹಾಕಿ ಖಚಿತಪಡಿಸಿಕೊಳ್ಳಲಾಗುವುದು)<br>7. ಅರ್ಜಿದಾರರು ಕಾರ್ಮಿಕ ಇಲಾಖೆಯ ನೋಂದಣಿ ಸಂಖ್ಯೆ (ಕಟ್ಟಡ ನಿರ್ಮಾಣ ಕಾರ್ಮಿಕರಾಗಿದ್ದಲ್ಲಿ) ಹೊಂದಿರಬೇಕು.<br>8. ಅರ್ಜಿದಾರರು ಚುನಾವಣಾ ಆಯೋಗದ ಗುರುತಿನ ಚೀಟಿ ಸಂಖ್ಯೆಯನ್ನು ಹೊಂದಿರಬೇಕು.<br>9. ಅರ್ಜಿದಾರರು ವಿಕಲಚೇತನರಾಗಿದ್ದಲ್ಲಿ, ಆ ಬಗ್ಗೆ ಪ್ರಮಾಣ ಪತ್ರವನ್ನು ಹೊಂದಿರಬೇಕು.<br>10. ಅರ್ಜಿದಾರರು ಆಧಾರ್ ಸೀಡ್ ಆಗಿರುವ ಬ್ಯಾಂಕ್ ಖಾತೆ ಸಂಖ್ಯೆಯನ್ನು ಹೊಂದಿರಬೇಕು.<br>11. ಕ್ಯಾಬ್ ಡ್ರೈವರ್, ಮನೆ ಕೆಲಸದವರು, ತಳ್ಳುವ ಗಾಡಿಯಲ್ಲಿ ಮಾರುವವರು, ರಸ್ತೆ ಬದಿಯಲ್ಲಿ ಮಾರುವವರಿಗೆ ಮೊದಲ ಆಧ್ಯತೆ ನೀಡಲಾಗುವುದು.<br>12. ಪ್ರತಿ ಕುಟುಂಬಕ್ಕೆ ಒಂದು ಅರ್ಜಿಯನ್ನು ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.<br>13. ಆಯ್ಕೆಗೊಂಡ ಅರ್ಜಿದಾರರು ಪ್ರಾರಂಭಿಕ ಠೇವಣಿಯಾಗಿ ರೂ.100000/- (ರೂಪಾಯಿ ಒಂದು ಲಕ್ಷ ಮಾತ್ರ) ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ವಇ 61 ಹೆಚ್‌ಎಫ್‌ಎ 2022, ಬೆಂಗಳೂರು, ದಿನಾಂಕ: 12.05.2022 ರಂತೆ ರೂ.50000/- (ರೂಪಾಯಿ ಐವತ್ತು ಸಾವಿರಗಳು ಮಾತ್ರ) ಗಳನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಪಾವತಿಸುವುದು.<br>14. ಒಂದು ವೇಳೆ ಆಯ್ಕೆಯಾದ ಅರ್ಜಿದಾರರು ಈ ಹಿಂದೆ ಯಾವುದೇ ಸರ್ಕಾರಿ ಇಲಾಖೆ/ಸಂಸ್ಥೆಯಿಂದ ವಸತಿ/ನಿವೇಶನ ಪಡೆದಿರುವುದು ಅಥವಾ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿಯಲ್ಲಿನ ಯಾವುದೇ ಘಟಕದಡಿ ವಸತಿ ಸೌಲಭ್ಯದ ಪ್ರಯೋಜನ ಪಡೆದಿರುವುದು ಕಂಡುಬಂದಲ್ಲಿ, ಈ ಹಂಚಿಕೆಯನ್ನು ರದ್ದುಪಡಿಸಿ, ಪಾವತಿಸಿರುವ ಮೊತ್ತವನ್ನು ಸರ್ಕಾರದಿಂದ ಮುಟ್ಟುಗೋಲುಹಾಕಿಕೊಳ್ಳಲಾಗುವುದು.<br>15. ಫಲಾನುಭವಿಗಳಿಗೆ ಮನೆಗಳ ಹಂಚಿಕೆಯ ಮೀಸಲಾತಿಯನ್ನು ಪರಿಶಿಷ್ಟ ಜಾತಿಯವರಿಗೆ ಶೇ. 30 ರಷ್ಟು, ಪರಿಶಿಷ್ಟ ಪಂಗಡದವರಿಗೆ ಶೇ.10 ರಷ್ಟು, ಅಲ್ಪಸಂಖ್ಯಾತರಿಗೆ ಶೇ.15 ರಷ್ಟು ಹಾಗೂ ಇತರೆ ವರ್ಗಕ್ಕೆ ಶೇ.45 ರಷ್ಟು ಎಂಬುದಾಗಿ ನಿಗಧಿಪಡಿಸಲಾಗಿದ್ದು, ಯೋಜನೆಯ ಒಟ್ಟು ಶೇ.2 ರಷ್ಟು ಮನೆಗಳನ್ನು ವಿಕಲಚೇತನರಿಗೆ ನೆಲಮಹಡಿಯಲ್ಲಿ ಹಂಚಿಕೆ ಮಾಡಲಾಗುವುದು.<br><br>ಸಾರ್ವಜನಿಕ ಕೋಟಾದಡಿಯಲ್ಲಿ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರು ಆರಂಭಿಕ ಠೇವಣಿ ಮೊತ್ತ ರೂ.50,000/-ಗಳನ್ನು ಪಾವತಿಸಿ, ತಾವು ಇಚ್ಛಿಸಿದ ಫ್ಲಾಟ್ ಅನ್ನು ತಾವೇ ಸ್ವತಃ ಆನ್-ಲೈನ್ ಮೂಲಕ ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ.<br><br>ಸ್ಥಳೀಯ ಕೋಟಾದಡಿಯಲ್ಲಿ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರು ಆರಂಭಿಕ ಠೇವಣಿ ಮೊತ್ತ ರೂ.50,000/-ಗಳನ್ನು ಪಾವತಿಸಿದ ಅರ್ಜಿದಾರರನ್ನು ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ನಗರಾಶ್ರಯ ಸಮಿತಿಯ ಮೂಲಕ ಆಯ್ಕೆ ಮಾಡಲಾಗುವುದು. |

| | | |
|---|---|---|
| | | "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" ಈ ವರೆಗೆ ಒಟ್ಟು 74513 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 72899 ಅರ್ಜಿಗಳು ಅರ್ಹಗೊಂಡಿದ್ದು, 1614 ಅರ್ಜಿಗಳು ಅನರ್ಹಗೊಂಡಿರುತ್ತವೆ.<br><br>"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ"<br><br>ಪ್ರಸ್ತುತ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" 23 ಯೋಜನಾ ಸ್ಥಳಗಳಲ್ಲಿ 1 ಬಿ.ಹೆಚ್.ಕೆ. ಯ 7890 ಹಾಗೂ 2 ಬಿ.ಹೆಚ್.ಕೆ. 304 ಫ್ಲಾಟ್‌ಗಳು ಸೇರಿ ಒಟ್ಟು 8194 ಫ್ಲಾಟ್ ಗಳು ಪೂರ್ಣಗೊಂಡಿದ್ದು, ಪೂರ್ಣ ಮೊತ್ತವನ್ನು ಪಾವತಿಸುವ ಫಲಾನುಭವಿಗಳ ಹೆಸರಿಗೆ ಫ್ಲಾಟ್ ಅನ್ನು ನೋಂದಣಿ ಮಾಡಿ ಹಸ್ತಾಂತರಿಸಲಾಗುತ್ತಿದೆ.<br><br>ಯೋಜನಾ ಸ್ಥಳವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಸದರಿ ಯೋಜನೆಯಡಿ ಎಷ್ಟು ಫಲಾನುಭವಿಗಳು ಮುಂಗಡ ಹಣ ಪಾವಿಸಿದ್ದಾರೆ ಹಾಗೂ ಒಟ್ಟು ಮೊತ್ತವೆಷ್ಟು ಮನೆ ಹಂಚಿಕೆ ವಿಳಂಬಕ್ಕೆ ಇರುವ ಕಾರಣಗಳೇನು (ವಿವರ ನೀಡುವುದು); | "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" 1 ಬಿ.ಹೆಚ್.ಕೆ. ಯ 21,645 ಫಲಾನುಭವಿಗಳು ರೂ. 417.71 ಕೋಟಿಗಳು ಮೊತ್ತವನ್ನು ಪಾತಿಸಿರುತ್ತಾರೆ. 7890 ಫ್ಲಾಟ್ ಗಳು ಪೂರ್ಣಗೊಡಿಂಡಿದ್ದು, ಆದರೆ, ಫಲಾನುಭವಿಗಳು ಪೂರ್ಣ ಪ್ರಮಾಣದ ವಂತಿಕೆಯನ್ನು ಪಾವತಿಸದ ಕಾರಣ, ಮನೆ ಹಸ್ತಾಂತರ ಕಾರ್ಯವು ವಿಳಂಬವಾಗಿರುತ್ತದೆ.<br><br>"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ಪ್ರತಿ ಫಲಾನುಭವಿಯು ಸುಮಾರು ರೂ.9.70 ಲಕ್ಷಗಳಿಂದ ಹಾಗೂ ರೂ.10.50 ಲಕ್ಷಗಳವರೆಗೂ ವಂತಿಕೆ ಮೊತ್ತವನ್ನು ಪಾವತಿಸಬೇಕಾಗಿದೆ. ಆದರೆ ಬಡ ಫಲಾನುಭವಿಗಳು ಸಕಾಲದಲ್ಲಿ ವಂತಿಕೆ ಪಾವತಿಸುವಲ್ಲಿ ವಿಳಂಬವಾದ ಕಾರಣದಿಂದಾಗಿ ಮತ್ತು ಮನೆಗಳ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>1. ಪ್ರಸ್ತುತ, ಪ್ರಾರಂಭಿಕ ಠೇವಣಿಯನ್ನು ಪಾವತಿಸಿ, ಅನ್-ಲೈನ್‌ನಲ್ಲಿ ಮನೆಗಳನ್ನು ಆಯ್ಕೆ ಮಾಡಿಕೊಂಡಿರುವ 12,153 ಫಲಾನುಭವಿಗಳಿಗೆ ಮಾತ್ರ ಅವರ ಪಾಲಿನ ವಂತಿಕೆಯಲ್ಲಿ ರೂ 1.00 ಲಕ್ಷಗಳನ್ನು ಸರ್ಕಾರದಿಂದ ಭರಿಸಲು ಅಗತ್ಯವಿರುವ ರೂ. 121.53 ಕೋಟಿಗಳನ್ನುಬಿಡುಗಡೆಮಾಡಿದೆ.<br><br>2. ಫಲಾನುಭವಿಗಳು ರಾಷ್ಟ್ರೀಕೃತ/ ಖಾಸಗಿ / NBFC ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡ ಸಾಲದ ಬಡ್ಡಿ ಮೊತ್ತದಲ್ಲಿ ಶೇಕಡ 3 ರಿಂದ 5 ರಷ್ಟು (ಗರಿಷ್ಟ ರೂ.3000) ಮೊತ್ತವನ್ನು ಸಹಾಯಧನವಾಗಿ ಸರ್ಕಾರದಿಂದ ಪಾವತಿಸಿ ಅವರ ಮಾಸಿಕ ಸಾಲದ ಕಂತಿನ ಹೊರೆಯನ್ನು ಕಡಿಮೆ ಮಾಡಲು "ಬಡ್ಡಿ ಸಹಾಯಧನ ಯೋಜನೆ (Interest Subvention Scheme) ಅನ್ನು ಜಾರಿಗೆ ತರಲಾಗಿದೆ.<br><br>3. ಒಟ್ಟು ನಿಗಮದಿಂದ ನಿರ್ಮಿಸಲಾಗುತ್ತಿರುವ 3826 2 BHK ಮನೆಗಳ ಪೈಕಿ, 304 ಮನೆಗಳನ್ನು ಪೂರ್ಣಗೊಳಿಸಿ ಮಾರಾಟ ಮಾಡಲಾಗಿರುತ್ತದೆ. ಬಾಕಿ ಇರುವ 3,522 2 BHK ಫ್ಲಾಟ್‌ಗಳನ್ನು ಹರಾಜು ಮಾಡಿ ಸಂಗ್ರಹಿಸಿದ ಮೊತ್ತದಲ್ಲಿ ಬಾಕಿ ಇರುವ ಮನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.<br>ಮೇಲ್ಕಂಡ ಕ್ರಮಗಳನ್ನು ಕೈಗೊಂಡು "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ನಿರ್ಮಾಣಗೊಳ್ಳುತ್ತಿರುವ ಮನೆಗಳನ್ನು **ಸೆಪ್ಟಂಬರ್-2026**ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |
| ಇ) | ಬೆಂಗಳೂರು ನಗರದ ಕೋಗಿಲು ಬಡಾವಣೆಯಲ್ಲಿ ನಿವಾಸಿಗಳಿಗೆ ವಸತಿ ಸೌಲಭ್ಯ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಈ ಹಿಂದೆ ಅರ್ಜಿ ಸಲ್ಲಿಸಿ,ಕಾಯುತ್ತಿರುವ ಅರ್ಹ ಫಲಾನುಭವಿಗಳಿಗಿಂತ ಮುಂಚೆಯೇ ಕೋಗಿಲು ಬಡಾವಣೆ ನಿವಾಸಿಗಳಿಗೆ ವಸತಿ ಸೌಲಭ್ಯ ನೀಡಲು ಇರುವ ಮಾನದಂಡಗಳು ಮತ್ತು ಕಾರಣಗಳೇನು? ಸಂಪೂರ್ಣ ಮಾಹಿತಿ ನೀಡುವುದು); | "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" ಒಟ್ಟು 64 ಯೋಜನಾ ಪ್ರದೇಶದಲ್ಲಿ ಒಟ್ಟು 45124 ಮನೆಗಳನ್ನು ನಿರ್ಮಿಸುತ್ತಿದ್ದು, 23 ಯೋಜನಾ ಸ್ಥಳಗಳಲ್ಲಿ 1 ಬಿ.ಹೆಚ್.ಕೆ. ಯ 7890 ಪೂರ್ಣಗೊಂಡಿದ್ದು ಹಾಗೂ 37234 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಪೂರ್ಣ ಮೊತ್ತವನ್ನು ಪಾವತಿಸುವ ಫಲಾನುಭವಿಗಳ ಹೆಸರಿಗೆ ಫ್ಲಾಟ್ ಅನ್ನು ನೋಂದಣಿ ಮಾಡಿ ಹಸ್ತಾಂತರಿಸಲಾಗುತ್ತಿದೆ.<br><br>ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೋಗಿಲು ಪ್ರದೇಶದ ಸ.ನಂ. 99 & 94 ಗಳ ಸರ್ಕಾರಿ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಮೀಸಲಿರಿಸಲಾಗಿದ್ದು, ಸದರಿ ಜಮೀನಿನಲ್ಲಿ ಶೆಡ್ ಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದ ಕುಟುಂಬಗಳ ಶೆಡ್ ಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ದಿನಾಂಕ:20.12.2025 ರಂದು ತೆರವುಗೊಳಿಸಿದ್ದು, ಸದರಿ ತೆರವು ಕಾರ್ಯಾಚರಣೆಯಿಂದ ಸಂತ್ರಸ್ಥರಾದ ಕುಟುಂಬಗಳಿಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಯ್ಯಪ್ಪನಹಳ್ಳಿ, ಸ.ನಂ. 80 ರಲ್ಲಿ ನಿರ್ಮಿಸಿರುವ ಬಹುಮಹಡಿ ಕಟ್ಟಡದ ವಸತಿ ಸಂಕೀರ್ಣದಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸುವ ಸಂಬಂಧ ದಿನಾಂಕ: 29.12.2025 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲ್ಪಟ್ಟಿರುತ್ತದೆ. |

| | | |
|---|---|---|
| | | ಅದರಂತೆ, ಜಿಲ್ಲಾಡಳಿತ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಸಂತ್ರಸ್ಥರ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಅರ್ಹ ಸಂತ್ರಸ್ಥರ ಪಟ್ಟಿಯು ಅಗತ್ಯ ದಾಖಲೆಗಳೊಂದಿಗೆ ನಿಗಮಕ್ಕೆ ಸಲ್ಲಿಕೆಯಾಗಿರುವುದಿಲ್ಲ.<br><br>ಜಿಲ್ಲಾಡಳಿತ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದಿಂದ ಅಗತ್ಯ ದಾಖಲೆಗಳೊಂದಿಗೆ ಸ್ಥಳೀಯ ಶಾಸಕರ ಖೋಟಾದಡಿ ಆಶ್ರಯ ಸಮಿತಿಯ ಮೂಲಕ ಸಲ್ಲಿಕೆಯಾಗುವ ಪಟ್ಟಿಯನ್ನಾಧರಿಸಿ, ಸದರಿ ಅರ್ಹ ಸಂತ್ರಸ್ಥ ಕುಟುಂಬಗಳಿಗೆ ನಿಯಮಾನುಸಾರ 1 ಲಕ್ಷ ಬಹುಮಹಡಿ ಬೆಂಗಳೂರು ಯೋಜನೆಯಡಿ ವಸತಿ ಸೌಲಭ್ಯವನ್ನು ಕಲ್ಪಿಸಲು ಸರ್ಕಾರದಿಂದ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ವಇ 8 ಹೆಚ್‌ಎಫ್‌ಎ 2026]

**(ಬಿ.ಝಡ್. ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.

ಅನುಬಂಧ-01
ಪೂರ್ಣಗೊಂಡಿರುವ ಫ್ಲಾಟ್ ಗಳ ವಿವರ

| ಕ್ರ.ಸಂ. | ಯೋಜನಾ ಸ್ಥಳದ ಹೆಸರು & ಸರ್ವೆ ನಂ. | ಮಾದರಿ | ಮನೆಗಳ ಸಂಖ್ಯೆ | ಪೂರ್ಣಗೊಂಡಿರುವ ಮನೆಗಳ ಸಂಖ್ಯೆ |
|---|---|---|---|---|
| 1 ಬಿ.ಹೆಚ್.ಕೆ. | | | | |
| 1 | ಚಿಕ್ಕನಹಳ್ಳಿ-ಕಾಮನಹಳ್ಳಿ ಸ.ನಂ.71 | S+13 | 530 | 530 |
| 2 | ಗೂಳಿಮಂಗಲ ಸ.ನಂ.67 | S+12 | 344 | 344 |
| 3 | ಕೂಗೂರು ಸ.ನಂ.69 | G+3 | 256 | 256 |
| 4 | ಲಿಂಗಾಪುರ ಸ.ನಂ.112 | S+13 | 530 | 265 |
| 5 | ದೊಡ್ಡನಾಗಮಂಗಲ ಸ.ನಂ.11 | G+3 | 496 | 496 |
| 6 | ಜೆ.ಭೀಂಗಿಪುರ ಸ.ನಂ.29 | G+3 | 96 | 96 |
| 7 | ನವರತ್ನ ಅಗ್ರಹಾರ ಸ.ನಂ.14 | S+7 | 140 | 140 |
| 8 | ಬಿದರಹಳ್ಳಿ ಸ.ನಂ.193 | S+14 | 3967 | 448 |
| 9 | ಅಗ್ರಹಾರಪಾಳ್ಯ ಸ.ನಂ.30 | G+3 | 488 | 488 |
| 10 | ಇಟಗಲ್ ಪುರ್ ಸ.ನಂ.50 | G+3 | 352 | 352 |
| 11 | ಕುಕ್ಕನಹಳ್ಳಿ ಸ.ನಂ.77 | G+3 | 600 | 600 |
| 12 | ಕುಕ್ಕನಹಳ್ಳಿ ಸ.ನಂ.78 | G+3 | 512 | 512 |
| 13 | ಪಿಲ್ಲಹಳ್ಳಿ ಸ.ನಂ.53 | G+3 | 306 | 306 |
| 14 | ಸಾದೇನಹಳ್ಳಿ ಸ.ನಂ.30 | G+3 | 128 | 128 |
| 15 | ತೋಟಗರ ಸ.ನಂ.14 | G+3 | 260 | 260 |
| 16 | ತಮ್ಮರಸನಹಳ್ಳಿ | G+3 | 704 | 176 |
| 17 | ಚಿಕ್ಕೆಲ್ಲೂರು ರಾಂಪೂರ ಸ.ನಂ.01 | S+14 | 516 | 516 |
| 18 | ದೇವಗೆರೆ ಸ.ನಂ.67 | G+3 | 140 | 140 |
| 19 | ದೇವಗೆರೆ ಸ.ನಂ.68 | S+14 | 624 | 624 |
| 20 | ಕೆಂಚನಪುರ ಸ.ನಂ.63 | S+14 | 225 | 225 |
| 21 | ನೆಲಗುಳಿ ಸ.ನಂ.145 ಭಾಗ-2 & ಭಾಗ-3 | S+14 | 1552 | 988 |
| | **1 ಬಿ.ಹೆಚ್.ಕೆ. ಒಟ್ಟು** | | **12766** | **7890** |
| 2 ಬಿ.ಹೆಚ್.ಕೆ. | | | | |
| 1 | ಗೂಳಿಮಂಗಲ ಸ.ನಂ.67 | S+8 | 144 | 144 |
| 2 | ಕೆ. ನಾರಾಯಣಪುರ ಸ.ನಂ. 40 | S+8 | 160 | 160 |
| | **2 ಬಿ.ಹೆಚ್.ಕೆ. ಒಟ್ಟು** | | **304** | **304** |
| | **ಒಟ್ಟು** | | **13070** | **8194** |